**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂಎಫ್ ಸಿ ನ್ಯಾಯಾಲಯ, ರಾಣೆಬೆನ್ನೂರು.**

**ಅಪರಾಧಿಕ ಪ್ರಕರಣ ಸಂಖ್ಯೆ: 3378/2024.**

ಪಿರ್ಯಾದಿಃ ಸರ್ಕಾರ ಪರವಾಗಿ ರಾಣೇಬೆನ್ನೂರು ಶಹರ ಪೋಲಿಸ್ ಠಾಣೆ.

**ವಿರುದ್ಧ**

ಆರೋಪಿಃ 2. ಶಕುಂತಲಾ ಕೋಂ ತುಕಾರಾಮಸಾ ಬಾಂಡ್ಗೆ
ವಯಾಃ 45 ವರ್ಷ ಸಾಃ ಗೋಕುಲ ರಸ್ತೆ, ಹುಬ್ಬಳ್ಳಿ, ಜಿಃ ಧಾರವಾಡ.
3. ಸದಾನಂದ ತುಕಾರಾಮಸಾ ಬಾಂಡ್ಗೆ .
ವಯಾಃ 28 ವರ್ಷ ಸಾಃ ಗೋಕುಲ ರಸ್ತೆ, ಹುಬ್ಬಳ್ಳಿ, ಜಿಃ ಧಾರವಾಡ.

*****

**ದಂಡ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ.**

**ಪ್ರಶ್ನೆ- 1 :** ನೀವು ಈ ಪ್ರಕರಣದ ಪಿರ್ಯಾದಿ ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

**ಉತ್ತರ.2 :** ಹೌದು. ಕೇಳಿದ್ದೇನೆ.

**ಉತ್ತರ.3:** ಹೌದು. ಕೇಳಿದ್ದೇನೆ.

**ಪ್ರಶ್ನೆ-2 :** ಪ್ರಾಸಾ-1 ಯಲ್ಲಮ್ಮ ಅವರು ಸಾಕ್ಷ್ಯ ನುಡಿದು, ಆಕೆ ಹಾಗೂ 1 ನೆ ಆರೋಪಿಯ ವಿವಾಹ ದಿಃ 17.04.2008 ರಂದು ಹರಿಹರದ ಕಸ್ತೂರಬಾ ಕಲ್ಯಾಣ ಮಂಟಪದಲ್ಲಿ ನಡೆದ ಸಾಮೂಹಿಕ ವಿವಾಹದಲ್ಲಿ ಜರುಗಿರುತ್ತದೆ, ವಿವಾಹನದ ನಂತರ 1 ನೆ ಆರೋಪಿಯ ಜೊತೆ ಹುಬ್ಬಳ್ಳಿಯಲ್ಲಿ ವಾಸವಾಗಿದ್ದೆ, ಸದರಿ ಮೆಯಲ್ಲಿ ಆರೋಪಿಗಳು ಹಾಗೂ ಆಕೆಯ ಮಾವ ತುಕಾರಾಮಸಾ ಬಾಂಡ್ಗೆ ರವರು ವಾಸವಿದ್ದರು. ಸ್ವಲ್ಪ ದಿನದ ಮಟ್ಟಿಗೆ ಚೆನ್ನಾಗಿದ್ದು, ನಂತರ ಮಕ್ಕಳು ಆಗಲಿಲ್ಲವೆಂದು ಆಕೆಗೆ ಅವಾಚ್ಯ ಶಬ್ದಗಳಿಂದ ಬೈದು, ಹೊಡೆ ಬಡಿ ಮಾಡುತ್ತಿದ್ದರು. ದಿಃ 08.03.2010 ರಲ್ಲಿ ಆಕಗೆ ಗಂಡು ಮಗು ಜನಿಸಿದ್ದು ನಂತರವೂ ಸಹ ಆಕೆಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಟ್ಟಿದ್ದು ಆಕೆಯನ್ನು ಹೊಡೆದು ಮನೆಯಿಂದ ಆಚೆ ಹಾಕಿರುತ್ತೀರಿ, ಅನಿವಾರ್ಯವಾಗಿ 2012 ರಲ್ಲಿ ಆಕೆಯ ತವರು ಮನೆಗೆ ಹೋಗಿರುತ್ತಾಳೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2 :** ಸುಳ್ಳು.

**ಉತ್ತರ.3:** ಸುಳ್ಳು.

**ಪ್ರಶ್ನೆ-3 :** ಪ್ರಾಸಾ-1 ರವರು ಮುಂದುವರೆದು 2-3 ಬಾರಿ ಪಂಚಾಯಿತಿ ನಡೆಸಿದರೂ

ಆರೋಪಿಗಳು ಪಂಚಾಯಿತಿಗೆ ಬಂದಿರುವುದಿಲ್ಲ, ಆಕೆಯ ತವರು ಮನೆಯ ಬಳಿ ಬಂದು ಗಲಾಟೆ ಮಾಡುವುದು ಮಾಡುತ್ತಿದ್ದರು, ದಿಃ 28-12-2013 ರಂದು ಮದ್ಯಾಹ್ನ ನೀವು ಆಕೆಯ ತವರು ಮನೆಯ ಬಳಿ ಬಂದು ಆಕೆಯನ್ನು ಹಾಗೂ ಮಗುವನ್ನು ಎಳೆದಾಡಿ, ಹೊಡೆದು ಮಗುವನ್ನು ಆಕೆಯಿಂದ ಕಸಿದುಕೊಳ್ಳಲು ಪ್ರಯತ್ನಿಸಿದಿರಿ. ಅಷ್ಟೆ ಅಲ್ಲದೆ ಆಕೆಯನ್ನು ಸಾಯಿಸಿ ಮಗುವನ್ನು ಕರೆದುಕೊಂಡು ಹೋಗುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಆಷ್ಟರಲ್ಲಿ ಚಾಸಾ-5 ರಿಂದ 9 ರವರು ಗಲಾಟೆ ಬಿಡಿಸಿ ಆರೋಪಿಗಳನ್ನು ಬೈದು ಕಳುಹಿಸಿರುತ್ತಾರೆ. ಆಕೆಯ ಅಣ್ಣ ಮನೆಯಲ್ಲಿ ಇಲ್ಲದ ಕಾರಣ ಎರಡು ದಿನಗಳ ನಂತರ ಠಾಣೆಗೆ ಹೋಗಿ ದಿಃ 02-12-2013 ರಂದು ದೂರು ನೀಡಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ-4** : ಫ್ರಾಸಾ-1 ರವರು ಮುಂದುವರೆದು ಆಕೆ ದೂರು ನೀಡಿದ ಮೇರೆಗೆ ಪೋಲಿಸರು ಮರುದಿನ ದಿಃ 03-12-2023 ರಂದು ಘಟನಾ ಸ್ಥಳಕ್ಕೆ ಬೇಟಿ ನೀಡಿ ಆಕೆ ಸ್ಥಳ ತೋರಿಸಿದ ಮೇರೆಗೆ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 10.00 ರಿಂದ 11.00 ಗಂಟೆಯವರೆಗೆ ಮಹಜರ ಕ್ರಮ ಜರುಗಿಸಿ ಆಕೆಯ ಸಹಿ ಪಡೆದಿರುತ್ತಾರೆ . ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿದು ಆಕೆಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದ ಆಕೆಯ ಅತ್ತೆ ಮತ್ತು ಮೈದುನನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ-5** : ಫ್ರಾಸಾ-2 ಗೀತಾ ಬಡ್ಡಿ ಅವರು ಸಾಕ್ಷ್ಯ ನುಡಿದು, ಚಾಸಾ-1 ಆಕೆಯ ಮಗಳು, ಆಕೆಯ ಮಗಳನ್ನು 1ನೆ ಆರೋಪಿಯ ಜೊತೆಗೆ ಸುಮಾರು 13-14 ವರ್ಷಗಳ ಹಿಂದೆ ಹರಿಹರದಲ್ಲಿ ಮದುವೆ ಮಾಡಿರುತ್ತೇವೆ ಮದುವೆಯ ನಂತರ ಅವರು ತಮ್ಮ ಗಂಡನ ಮನೆ ಹುಬ್ಬಳ್ಳಿಯಲ್ಲಿ ವಾಸವಾಗಿದ್ದರು ಸ್ವಲ್ಪ ದಿನಗಳ ಮಟ್ಟಿಗೆ ಅವರು ಚೆನ್ನಾಗಿದ್ದು, ಮಕ್ಕಳು ಆಗಿಲ್ಲ ಎನ್ನುವ ಕಾರಣಕ್ಕೆ ಆರೋಪಿಗಳು ಚಾಸಾ-1 ರವರಿಗೆ ಮಾನಸಿಕ ಕಿರುಕುಳ ಕೊಡುತ್ತಿದ್ದರು. ಅವರಿಗೆ ಊಟ ಕೊಡುತ್ತಿರಲಿಲ್ಲ, ಬಂಜೆ ಎಂದು ಅವಮಾನ ಮಾಡುತ್ತಿದ್ದರು ಅವಾಚ್ಯ ಶಬ್ದಗಳಿಂದ ನಿಂದಿಸಿ ಹೊಡೆಯುತ್ತಿದ್ದರು ಎಂದು ಸಾಕ್ಷ್ಯನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ-6** : ಫ್ರಾಸಾ-2 ರವರು ಮುಂದುವರೆದು ಚಾಸಾ-1 ರವರಿಗೆ ಸ್ವಲ್ಪ ದಿನಗಳ ನಂತರ ಒಂದು ಮಗು ಜನಿಸಿರುತ್ತದೆ. ಆಗ ಸ್ವಲ್ಪ ದಿನಗಳ ಮಟ್ಟಿಗೆ ಚೆನ್ನಾಗಿದ್ದರು, ಮಗುವಿನ ಆರೈಕೆಗೆ ತವರು

ಮನೆಗೆ ಕಳುಹಿಸುವಂತೆ ಕೇಳಿದರೂ ಸಹ ಕಳುಹಿಸಿರುವುದಿಲ್ಲ. ನಂತರ 1 ನೆ ಆರೋಪಿ ಕುಡಿದು ಬಂದು ಹೊಡೆಯುವುದು, ಬೈಯುವುದು ಮಾಡುತ್ತಿದ್ದರು. ಮನೆ ಬಿಟ್ಟು ಹೋಗು ಎಂದು ಹೆದರಿಸಿ ಬೆದರಿಸಿ ಚಾಸಾ-1 ರವರನ್ನು ತವರು ಮನೆಗೆ ಕಳುಹಿಸಿರುತ್ತಾರೆ. ಚಾಸಾ-1 ರವರು ತವರು ಮನೆಗೆ ಬಂದ ನಂತರ ನಾವು ಆರೋಪಿಗಳನ್ನು ಕರೆಯಿಸಿ 4-5 ಬಾರಿ ಪಂಚಾಯಿತಿ ಮಾಡಿರುತ್ತೇವೆ. ಆದರೂ 1 ನೆ ಆರೋಪಿ ಚಾಸಾ-1 ರವರನ್ನು ತನ್ನ ಮನೆಗೆ ಕರೆದುಕೊಂಡು ಹೋಗಿರುವುದಿಲ್ಲ , ಇದಾದ 2-3 ತಿಂಗಳ ನಂತರ ಆರೋಪಿಗಳು ಅವರ ಮನೆಗೆ ಬಂದು ಗಲಾಟೆ ಮಾಡಿ ಚಾಸಾ-1 ರವರನ್ನು ಹೊಡೆದು ಮಗುವನ್ನು ಕರೆದುಕೊಂಡು ಹೋಗುವುದಾಗಿ ಗಲಾಟೆ ಮಾಡಿರುತ್ತಾರೆ. ಮಗುವಿನ ಕೈಯನ್ನು ಹಿಡಿದು ಎಳೆದಾಡಿ ಚಾಸಾ-1 ರವರಿಗೆ ಜೀವ ತೆಗೆಯುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಗಲಾಟೆ ಕೇಳಿ ನಮ್ಮ ಓಣಿಯ ಜನ ಅಂದರೆ ಚಾಸಾ-3, 5, 7 ಮತ್ತು 8 ರವರು ಬಂದು ಮಗುವನ್ನು ಎತ್ತಿಕೊಂಡು ಜಗಳ ಬಿಡಿಸಿರುತ್ತಾರೆ. ಚಾಸಾ-1 ರವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಮನೆಯಲ್ಲಿಯೇ ಚಿಕಿತ್ಸೆ ಮಾಡಿದೆವು, ಗಲಾಟೆ ಆದ ದಿನ ನಮ್ಮ ಮನೆಯಲ್ಲಿ ಆಕೆ ಮತ್ತು ಚಾಸಾ-1 ರವರು ಮಾತ್ರ ಇದ್ದುದ್ದರಿಂದ 2 ದಿನಗಳ ನಂತರ ಆಕೆಯ ಮಗ ಚಾಸಾ-6 ರವರು ಚಾಸಾ-1 ರವರನ್ನು ಠಾಣೆಗೆ ಕರೆದುಕೊಂಡು ಹೋಗಿ ದೂರು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ-7** : ಫ್ರಾಸಾ-3 ಬಸವರಾಜ ಅವರು ಸಾಕ್ಷ್ಯ ನುಡಿದು, ಚಾಸಾ-1 ರವರಿಗೆ 2008 ರಲ್ಲಿ 1 ನೆ ಆರೋಪಿಯೊಂದಿಗೆ ಹರಿಹರದಲ್ಲಿ ವಿವಾಹ ಆಗಿರುತ್ತದೆ . ವಿವಾಹದ ನಂತರ ಅವರು ತಮ್ಮ ಗಂಡನ ಮನೆಯಾದ ಹುಬ್ಬಳ್ಳಿಯಲ್ಲಿ ವಾಸವಾಗಿದ್ದರು. 1-2 ವರ್ಷ ಚೆನ್ನಾಗಿದ್ದು ಮಕ್ಕಳಿಲ್ಲದ ಕಾರಣ ಆರೋಪಿಗಳು ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದರು, 2010 ರಲ್ಲಿ ಅವರಿಗೆ ಒಂದು ಮಗು ಆಗಿರುತ್ತದೆ. ನಂತರವೂ ಆರೋಪಿಗಳು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದರು. ಇದಾದ ಸ್ವಲ್ಪ ದಿನಗಳಲ್ಲಿ ಚಾಸಾ-1 ರವರನ್ನು ತವರು ಮನೆಗೆ ಕಳುಹಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ-8** : ಫ್ರಾಸಾ-3 ರವರು ಮುಂದುವರೆದು 2 ವರ್ಷಗಳ ನಂತರ ಅಂದರೆ 2013 ರಲ್ಲಿ ಆರೋಪಿಗಳು ಚಾಸಾ-1 ರವರ ಮನೆಯ ಬಳಿ ಬಂದು ಬೀದಿಯಲ್ಲಿ ನಿಂತು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಚಾಸಾ-1 ರವರನ್ನು ಕುರಿತು ನಿನ್ನನ್ನು ಸುಮ್ಮನೆ ಬಿಡುವುದಿಲ್ಲ. ಮಗುವನ್ನು ನಾವು ಕರೆದುಕೊಂಡು ಹೋಗುತ್ತೇವೆ ಎಂದು ಕೂಗಾಡುತ್ತಿದ್ದರು. ಕೂಗಾಟ ಕೇಳಿ ಆತ, ಚಾಸಾ-8 ಮತ್ತು 9 ರವರು ಸ್ಥಳಕ್ಕೆ ಬಂದು ನೋಡಿದಾಗ ಚಾಸಾ-1 ರವರನ್ನು

ಆರೋಪಿಗಳು ಹಿಡಿದು ಎಳೆದಾಡುತ್ತಿದ್ದರು. ಕೂಡಲೆ ನಾವು ಅವರನ್ನು ಬಿಡಿಸಿ ಸಮಾಧಾನ ಪಡಿಸಿದೆವು. ಆರೋಪಿಗಳು ಅಷ್ಟಕ್ಕೆ ಸುಮ್ಮನಿರದೆ ಚಾಸಾ–1 ರವರನ್ನು ಸುಮ್ಮನೆ ಬಿಡುವುದಿಲ್ಲ, ಮಗುವನ್ನು ಕರೆದುಕೊಂಡು ಹೋಗುತ್ತೇವೆ ಎಂದು ಕೂಗಾಡುತ್ತಾ ಅಲ್ಲಿಂದ ಹೋಗಿರುತ್ತಾರೆ ಗಲಾಟೆಯಲ್ಲಿ ಚಾಸಾ–1 ರವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ಮನೆಯಲ್ಲಿಯೇ ಚಿಕಿತ್ಸೆ ಪಡೆದುಕೊಂಡರು. ನಾವು ಅಲ್ಲಿಂದ ಹೊರಟು ಹೋದೆವು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ.

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ–9** : ಫ್ರಾಸಾ–4 ಗುರುರಾಜ ಬಡ್ಡಿ ಅವರು ಸಾಕ್ಷ್ಯ ನುಡಿದು, ಚಾಸಾ–1 ನನ್ನ ತಂಗಿ. 1 ನೇ ಆರೋಪಿ ಆತನ ತಂಗಿಯ ಗಂಡ. ದಿಃ 17–04–2008 ರಂದು 1 ನೇ ಆರೋಪಿಯೊಂದಿಗೆ ತನ್ನ ತಂಗಿಯ ವಿವಾಹವನ್ನು ಹರಿಹರದ ಕಸ್ತೂರಬಾ ಕಲ್ಯಾಣ ಮಂಟಪದಲ್ಲಿ ಮಾಡಿರುತ್ತಾರೆ, ಮದುವೆಯ ನಂತರ ಅವರು ತಮ್ಮ ಗಂಡನ ಮನೆ ಹುಬ್ಬಳ್ಳಿಯಲ್ಲಿ ವಾಸವಾಗಿದ್ದರು, ಸ್ವಲ್ಪ ದಿನಗಳ ಮಟ್ಟಿಗೆ ಅವರು ಚೆನ್ನಾಗಿದ್ದು, ಮಕ್ಕಳು ಆಗಿಲ್ಲ ಎನ್ನುವ ಕಾರಣಕ್ಕೆ ಆರೋಪಿಗಳು ಚಾಸಾ–1 ರವರಿಗೆ ಮಾನಸಿಕ ಕಿರುಕುಳ ಕೊಡುತ್ತಿದ್ದರು. ಅವರಿಗೆ ಊಟ ಕೊಡುತ್ತಿರಲಿಲ್ಲ, ಬಂಜೆ ಎಂದು ಅವಮಾನ ಮಾಡುತ್ತಿದ್ದರು. ಅವಾಚ್ಯ ಶಬದಗಳಿಂದ ನಿಂದಿಸಿ ಹೊಡೆಯುತ್ತಿದ್ದರು. ಈ ಸಂಬಂಧ ಸುಮಾರು ಬಾರಿ ಪಂಚಾಯಿತಿ ಮಾಡಿ ಬುದ್ದಿವಾದ ಹೇಳಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ–10** : ಫ್ರಾಸಾ–4 ರವರು ಮುಂದುವರೆದು, ಚಾಸಾ–1 ರವರಿಗೆ 2010 ರಲ್ಲಿ ಒಂದು ಮಗು ಜನಿಸಿರುತ್ತದೆ. ಆಗ ಸುಮಾರು 6 ತಿಂಗಳ ಮಟ್ಟಿಗೆ ಚೆನ್ನಾಗಿದ್ದರು. ಮಗುವಿನ ಆರೈಕೆಗೆ ತವರು ಮನೆಗೆ ಕಳುಹಿಸುವಂತೆ ಕೇಳಿದರೂ ಸಹ ಕಳುಹಿಸಿರುವುದಿಲ್ಲ. ಆತ ಒಮ್ಮೆ ತನ್ನ ತಂಗಿಯನ್ನು ಕರೆದುಕೊಂಡು ಬರಲು ಹೋದಾಗ 1 ನೆ ಆರೋಪಿ ಆತನನ್ನು ಹೊಡೆಯಲು ಬಂದರು ನಂತರ 1 ನೆ ಆರೋಪಿ ಕುಡಿದು ಬಂದು ಹೊಡೆಯುವುದು , ಬೈಯುವುದು ಮಾಡುತ್ತಿದ್ದರು. ಮನೆ ಬಿಟ್ಟು ಹೋಗು ಎಂದು ಹೆದರಿಸಿ ಬೆದರಿಸಿ ಚಾಸಾ–1 ರವರನ್ನು ಮಗುವಿನೊಂದಿಗೆ ತವರು ಮನೆಗೆ ಕಳುಹಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ–11** : ಫ್ರಾಸಾ–4 ರವರು ಮುಂದುವರೆದು ಚಾಸಾ–1 ರವರು ತವರು ಮನೆಗೆ ಬಂದ ನಂತರ ಅವರು ಆರೋಪಿಗಳನ್ನು ಕರೆಸಿ 4–5 ಸಾರಿ ಪಂಚಾಯಿತಿ ಮಾಡಿರುತ್ತೇವೆ. ಆದರೂ 1 ನೆ

ಆರೋಪಿ ಚಾಸಾ–1 ರವರನ್ನು ತನ್ನ ಮನೆಗೆ ಕರೆದುಕೊಂಡು ಹೋಗಿರುವುದಿಲ್ಲ. ನವೆಂಬರ್ 28 ರಂದು ಆರೋಪಿಗಳು ನಮ್ಮ ಮನೆಯ ಬಳಿ ಬಂದು ಗಲಾಟೆ ಮಾಡಿ ಚಾಸಾ–1 ರವರನ್ನು ಹೊಡೆದು ಮಗುವನ್ನು ಕರೆದುಕೊಂಡು ಹೋಗುವುದಾಗಿ ಗಲಾಟೆ ಮಾಡಿರುತ್ತಾರೆ. ಮಗುವಿನ ಕೈಯನ್ನು ಹಿಡಿದು ಎಳೆದಾಡಿ ಚಾಸಾ–1 ರವರಿಗೆ ಜೀವ ತೆಗೆಯುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಬಿಡಿಸಲು ಹೋದ ಚಾಸಾ–4 ರವರಿಗೂ ಸಹ ಹೊಡೆದಿರುತ್ತಾರೆ. ಗಲಾಟೆ ಕೇಳಿ ಅವರ ಓಣಿಯ ಜನ ಅಂದರೆ ಚಾಸಾ–3, 5 7 ರಿಂದ 9 ರವರು ಬಂದು ಮಗುವನ್ನು ಎತ್ತಿಕೊಂಡು ಜಗಳ ಬಿಡಿಸಿರುತ್ತಾರೆ. ಆತ ಸಂಜೆ ವಾಪಸ್ಸು ಬಂದಾಗ ಚಾಸಾ–1 ಮತ್ತು 4 ರವರು ಗಲಾಟೆ ವಿಚಾರ ತಿಳಿಸಿರುತ್ತಾರೆ, ಹಿರಿಯರೊಂದಿಗೆ ಮಾತನಾಡಿ 2 ದಿನಗಳ ನಂತರ ಗಲಾಟೆ ಸಂಬಂಧ ಚಾಸಾ–1 ರವರ ಮೂಲಕ ದೂರು ದಾಖಲಿಸಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ–12** : ಫ್ರಾಸಾ–5 ಕುಮಾರ ಎನ್ ಕಮ್ಮಾರ ಅವರು ಸಾಕ್ಷ್ಯ ನುಡಿದು ದಿಃ 03–12–2013 ರಂದು ಚಾಸಾ–1 ಮತ್ತು ಆರೋಪಿತರ ನಡುವೆ ಜಗಳ ಆಗಿದ್ದ ಕಾರಣ ಆತನನ್ನು ಮತ್ತು ಚಾಸಾ–3 ರವರನ್ನು ಪಂಚರಾಗಿ ಸಹಕರಿಸುವಂತೆ ಮೌಖಿಕವಾಗಿ ಕರೆದಿದ್ದು ಅದಕ್ಕೆ ಅವರು ಒಪ್ಪಿ ಕನಕದಾಸ ನಗರದಲ್ಲಿರುವ ಚಾಸಾ–1 ರವರ ತಾಯಿಯ ಮನೆಗೆ ಚಾಸಾ–1 ರವರು ತೋರಿಸಿದ ಮೇರೆಗೆ ಆತ ಮತ್ತು ಚಾಸಾ–3 ರವರು ಹೋಗಿದ್ದು ಅಲ್ಲಿ ಪೋಲಿಸರು ನಿಪಿ–2 ರಂತೆ ಪಂಚನಾಮೆ ತಯಾರಿಸಿ ಅದಕ್ಕೆ ಆತನ ಸಹಿ ಪಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ–13** : ಫ್ರಾಸಾ–6 ಶ್ರೀನಿವಾಸ ಅವರು ಸಾಕ್ಷ್ಯ ನುಡಿದು ಚಾಸಾ–1 ರವರು ಆತನ ಸೊಸೆ ಆಗಬೇಕು. 2008 ರಲ್ಲಿ ಚಾಸಾ–1 ರವರು ಆರೋಪಿಯೊಂದಿಗೆ ವಿವಾಹವಾಗಿರುತ್ತದೆ.2013 ರಲ್ಲಿ ಇಬ್ಬರ ಮಧ್ಯ ಜಗಳ ಆಗಿರುತ್ತದೆ. ಆರೋಪಿಯು ಚಾಸಾ–1 ರವರನ್ನು ನಿಂದಿಸಿರುತ್ತಾರೆ. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ–14** : ಫ್ರಾಸಾ–7 ಪ್ರಶಾಂತ ಅವರು ಸಾಕ್ಷ್ಯ ನುಡಿದು 2013 ರಂದು ಮಧ್ಯಾಹ್ನ 12 ಗಂಟೆಗೆ ಚಾಸಾ–1 ರವರು ರವಿಕುಮಾರ ಆರೋಪಿ 2 ಮತ್ತು 3 ರವರ ಜೊತೆ ಜಗಳ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಕೈಯಿಂದ ಹೊಡೆ ಬಡಿ ಮಾಡಿದರು, ಆತ ಘಟನಾ ಸ್ಥಳದಲ್ಲಿ

ಹಾಜರಿದ್ದುದ್ದರಿಂದ ಜಗಳ ಬಿಡಿಸಿದ್ದರು, 2008 ರಲ್ಲಿ ರವಿಕುಮಾರ ಎನ್ನುವವರೊಂದಿಗೆ ಚಾಸಾ-1 ರವರ ಮದುವೆ ಆಗಿರುತ್ತದೆ. 2010 ರಲ್ಲಿ ಅವರಿಗೆ ಮಗು ಆಗಿರುತ್ತದೆ. ಅಲ್ಲಿಂದ ರವಿಕುಮಾರ ಅವರು ಚಾಸಾ-1 ರವರಿಗೆ ಕಿರುಕುಳ ಕೊಡುತ್ತಿದ್ದು ಮತ್ತೆ 2013 ರಲ್ಲಿ ಇಬ್ಬರಿಗೂ ಜಗಳ ಆಗಿರುತ್ತದೆ. ಸದರಿ ಜಗಳವು ಅವರ ಮುಂದೆ ಆಗಿರುತ್ತದೆ. ಸದರಿ ಜಗಳದ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ-15** :ಪ್ರಾಸಾ-8 ಸುರೇಶ ಯಳ್ಳೂರು ಅವರು ಸಾಕ್ಷ್ಯ ನುಡಿದು ದಿನಾಂಕ 03-12-2013 ರಂದು ಆತ ಚಾಸಾ-11 ಇವರಿಂದ ಕಡತವನ್ನು ಪಡೆದು ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತಾರೆ, ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-2 ಮತ್ತು 3 ಇವರ ಸಮಕ್ಷಮ ಬೆಳಿಗ್ಗೆ 10 - 11 ಗಂಟೆಯವರೆಗೆ ಫಿರ್ಯಾದಿಯ ತಾಯಿಯ ಮನೆ ಮುಂದೆ ಅವಳು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಕೈಗೊಂಡಿರುತ್ತಾರೆ, ನಂತರ ಸಾಕ್ಷಿದಾರರಾದ ಚಾಸಾ-4 ರಿಂದ 10 ಇವರ ಹೇಳಿಕೆ ಪಡೆದಿರುತ್ತಾರೆ, ಚಾಸಾ-1 ಇವರ ಕಡೆಯಿಂದ ಮದುವೆ ಆಮಂತ್ರಣ ಪತ್ರಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ, ವರ್ಗಾವಣೆಯ ಪ್ರಯುಕ್ತ ಸದ್ರಿ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-13 ಇವರಿಗೆ ಕಡತವನ್ನು ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ-16** : ಪ್ರಾಸಾ-9 ಪ್ರಮೋದ ಪಡವಳಕರ ಅವರು ಸಾಕ್ಷ್ಯ ನುಡಿದು, ದಿನಾಂಕ 02-12-2013 ರಂದು ಆತ ಮಧ್ಯಾಹ್ನ 2 ರಿಂದ ರಾತ್ರಿ 9 ಗಂಟೆಯವರೆಗೆ ಠಾಣಾ ಪ್ರಭಾರದಲ್ಲಿ ಹಾಜರಿದ್ದಾಗ ಚಾಸಾ-1 ಇವರು ಹಾಜರಾಗಿ ಸಲ್ಲಿಸಿದ ಲಿಖಿತ ದೂರನ್ನು ಸ್ವೀಕರಿಸಿ ನಿಪಿ-5 ರಂತೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ, ದಿನಾಂಕ 03-12-2013 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-12 ಇವರಿಗೆ ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ಏನು ಹೇಳುತ್ತೀರಿ?

**ಉತ್ತರ.2** :ಸುಳ್ಳು.

**ಉತ್ತರ.3**:ಸುಳ್ಳು.

**ಪ್ರಶ್ನೆ-17** : ಪ್ರಾಸಾ-10 ಶ್ರೀಶೈಲ್ ಕೌಜಲಗಿ ಅವರು ಸಾಕ್ಷ್ಯ ನುಡಿದು, ದಿಃ 06.03.2014 ರಂದು ಈ ಕೇಸಿನ ತನಿಖೆಯನ್ನು ಚಾಸಾ-12 ರವರಿಂದ ವಹಿಸಿಕೊಂಡು ಈಗಾಗಲೆ ತನಿಖೆಯನ್ನು ಪರಿಶೀಲಿಸಿರುತ್ತೇನೆ. ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ಏನು

ಹೇಳುತ್ತೀರಿ?

**ಉತ್ತರ**.2 :ಸುಳ್ಳು.

**ಉತ್ತರ**.3:ಸುಳ್ಳು.

**ಪ್ರಶ್ನೆ–18 :** ನೀವು ಮತ್ತೇನಾದರೂ ಹೇಳುವುದು ಅಥವಾ ದಾಖಲೆ ಸಲ್ಲಿಸುವುದು ಇದೆಯಾ?

**ಉತ್ತರ**.2 :ಸುಳ್ಳು.

**ಉತ್ತರ**.3:ಸುಳ್ಳು.

**ಪ್ರಶ್ನೆ– 19:** ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

**ಉತ್ತರ**.2 :ಸುಳ್ಳು.

**ಉತ್ತರ**.3:ಸುಳ್ಳು.

(ಆರೋಪಿತರ ಹೇಳಿಕೆಯನ್ನು ಅವರು ಹೇಳಿದಂತೆ ಬರೆದುಕೊಳ್ಳಲಾಗಿದೆ ಅಂತ ಧೃಡೀಕರಿಸುತ್ತೇನೆ)

**ದಿನಾಂಕ** : 03-06-2026. **ಸಹಿ/–**

**ಸ್ಥಳ** : **ರಾಣೆಬೆನ್ನೂರು.**

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ರಾಣೆಬೆನ್ನೂರು.**